# ವಾರ್ಡ್ ನಂ: 83 ಕಾಡುಗುಡಿ ವಾರ್ಡ್ ಕಮಿಟಿ ಸಭೆಯ ನಡುವಳಿಗಳು:-

ದಿನಾಂಕ: 07/01/2022 ರಂದು ಕಾಡುಗುಡಿ ವಾರ್ಡ್ ಸಂಖ್ಯೆ: 83 ರ ವ್ಯಾಪ್ತಿಯಲ್ಲಿ ಮಾನ್ಯ ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ರವರ ಕಛೇರಿ ಆದೇಶ ಸಂ:ಬಿ12(5)/ಪಿಆರ್/35/2020-21 ದಿನಾಂಕ:21-09-2020 ಆದೇಶದಂತೆ ವಾರ್ಡ್ ಕಛೇರಿಯಲ್ಲಿ ಮಾನ್ಯ ವಾರ್ಡ್ ನೋಡಲ್ ಅಧಿಕಾರಿ, ಕಮಿಟಿಯ ಕಾರ್ಯದರ್ಶಿ, ಕಾಡುಗುಡಿ ವಾರ್ಡ್‌ನ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘದವರು ಮತ್ತು ಸಾರ್ವಜನಿಕರ ಸಮಕ್ಷಮದಲ್ಲಿ ಸಭೆ ನಡೆಸಲಾಯಿತು.

**ಈ ಕೆಳಕಂಡ ಅಧಿಕಾರಿಗಳು ಹಾಗೂ ಸದಸ್ಯರು ಸಭೆಯಲ್ಲಿ ಭಾಗವಹಿಸಿರುತ್ತಾರೆ**

1. ಶ್ರೀ.ಡಿ.ಎಂ.ಮುನಿರೆಡ್ಡಿ, ಅಧ್ಯಕ್ಷರು ಹಾಗೂ ನೋಡಲ್ ಅಧಿಕಾರಿಗಳು.
2. ಶ್ರೀ.ಎನ್.ವೆಂಕಟೇಶ್, ಸಹಾಯಕ ಅಭಿಯಂತರರು ಮತ್ತು ಕಾರ್ಯದರ್ಶಿ.
3. ಅಕ್ಕಮಹಾದೇವಿ, ಹಿರಿಯ ಆರೋಗ್ಯ ನಿರೀಕ್ಷಕರು, ವಾರ್ಡ್ ನಂ:83, ಕಾಡುಗುಡಿ, ಬಿ.ಬಿ.ಎಂ.ಪಿ
4. ಡಾ॥ ಕಂತರಾಜು, ಆರೋಗ್ಯಾಧಿಕಾರಿಗಳು, ಪ್ರಾರ್ಥಮಿಕ ಆರೋಗ್ಯ ಕೇಂದ್ರ, ಕಾಡುಗುಡಿ.
5. ಶ್ರೀ.ಮಂಜುನಾಥ್, ದ್ವಿತಿಯ ದರ್ಜೆ ಸಹಾಯಕ/ವರ್ಕ್ ಇನ್ಸ್‌ಪೆಕ್ಟರ್, ಕಾಡುಗುಡಿ ವಾರ್ಡ್ ನಂ.83
6. ಶ್ರೀ.ಅಂಜಿನಪ್ಪ, ಸಹಾಯಕ ಸಬ್ ಇನ್ಸ್‌ಪೆಕ್ಟರ್, ಕಾಡುಗುಡಿ ಪೋಲೀಸ್ ಠಾಣೆ.
7. ಶ್ರೀ.ಸುರೇಶ್, ಜೆ.ಇ. ಬೆಸ್ಕಾಂ
8. ಶ್ರೀ.ವಿ.ರವಿಚಂದ್ರ, ಎ.ಇ, ರಸ್ತೆಮೂಲಭೂತ ಸೌಕರ್ಯ ವಿಭಾಗ, ಮಹದೇವಪುರ
9. ಡಾ॥ ವಂದನಾ, ಆರೋಗ್ಯಾಧಿಕಾರಿಗಳು, ಪ್ರಾರ್ಥಮಿಕ ಆರೋಗ್ಯ ಕೇಂದ್ರ, ಕಾಡುಗುಡಿ.
10. ಶ್ರೀ.ಕುಪೇಂದ್ರ, ಸಬ್ ಇನ್ಸ್‌ಪೆಕ್ಟರ್, ಕಾಡುಗುಡಿ ಪೋಲೀಸ್ ಠಾಣೆ,
11. ಶ್ರೀ.ಮನೋಜ್ ಕುಮಾರ್, ಕಂದಾಯ ಪರಿವೀಕ್ಷಕರು, ಕಾಡುಗುಡಿ ವಾರ್ಡ್ ನಂ.83
12. ಶ್ರೀ.ಪಿ.ಸುದರ್ಶನ್, ಕಂದಾಯ ವಸೂಲಿಗಾರ, ಕಾಡುಗುಡಿ ವಾರ್ಡ್ ನಂ.83
13. ಶ್ರೀ.ಶ್ರೀನಿವಾಸ್, ಕಂದಾಯ ವಸೂಲಿಗಾರ, ಕಾಡುಗುಡಿ ವಾರ್ಡ್ ನಂ.83
14. ಶ್ರೀ.ವೆಂಕಟೇಶ್, ಸಿಬ್ಬಂದಿ, ಬಿ.ಬಡ್ಲ್ಯೂ.ಎಸ್.ಎಸ್.ಬಿ
15. ಶ್ರೀ.ಹನುಮಂತಪ್ಪ, ಸಿಬ್ಬಂದಿ, ಬಿ.ಬಡ್ಲ್ಯೂ.ಎಸ್.ಎಸ್.ಬಿ

**ಕಾಡುಗುಡಿ ವಾರ್ಡ್‌ನ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘದವರು ಮತ್ತು ಸಾರ್ವಜನಿಕರು**

| | |
|---|---|
| 1. ಹರಿಪ್ರಸಾದ್ ರೆಡ್ಡಿ | 18. ನಾಗರಾಜ್ ರೆಡ್ಡಿ |
| 2. ಸಂದೀಪ್ ಅನಿರುಧ್ | 19. ಹನುಮಾನ ಬಾಬು |
| 3. ಡಾ॥ ಸಾಯಿ ಕೀರ್ತಿ | 20. ಸಂಪಂಗಿ |
| 4. ಶಿವಕುಮಾರ್ ಪಾಟೀಲ್ | 21. ಎಸ್.ಮಾರಪ್ಪ |
| 5. ಗೌತಮ್ ಮಿಶ್ರ | 22. ಸುಮನ್ ಸೇನಾಪತಿ |
| 6. ಪುರುಷೋತಮ್ | 23. ಜಗದೀಶ್ವರಿ |
| 7. ಜಗದೀಶ್ | 24. ಮುನಿಲಕ್ಷ್ಮಿ |
| 8. ಸಂಧ್ಯಾ ಪ್ರಕಾಶ್ | 25. ಮಂಜುಳ |
| 9. ಪತಾಂಜಲಿ | 26. ಆನಂದ್ ಕುಮಾರ್ |
| 10. ಹರ್ಷ | 27. ಎನ್.ಎಂ.ಗೋಪಾಲ್ |
| 11. ಭಾಗ್ಯ | 28. ದಿಲೀಪ್ |
| 12. ವೆಂಕಟೇಶ್ ಗೌಡ | 29. ಪಿ.ಜೆ.ವೇಲು |
| 13. ನಾರಾಯಣ್ ರೆಡ್ಡಿ | |
| 14. ರವಿ-ಗುಟ್ಟ | |
| 15. ಗೋಪಾಲ್ ಗುಟ್ಟ | |
| 16. ರವಿ-ಕೇಬಲ್ | |
| 17. ವಿನೋದ್ ಕುಮಾರ್ | |

ಸಭೆಯಲ್ಲಿ ಹಾಜರಿದ್ದ ನೋಡಲ್ ಅಧಿಕಾರಿಗಳು, ಕಮಿಟಿಯ ಕಾರ್ಯದರ್ಶಿಗಳು, ಹಿರಿಯ ಆರೋಗ್ಯ ನಿರೀಕ್ಷಕರು, ಕಾಡುಗುಡಿ ವಾರ್ಡ್‌ನ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘದವರು ಮತ್ತು ಸಾರ್ವಜನಿಕರು ಉಪಸ್ಥಿತಿಯಲ್ಲಿದ್ದು, ಹಿರಿಯ ಆರೋಗ್ಯ ನಿರೀಕ್ಷಕರು ಸ್ವಾಗತಾ ಕೋರಿದ ನಂತರ ನೋಡಲ್ ಅಧಿಕಾರಿಗಳು ಕಲಾಪವನ್ನು ಪ್ರಾರಂಭಿಸಲು ಸೂಚಿಸಿದರು.

1. ಹಿಂದಿನ ಸಭೆಯಲ್ಲಿ ನಡೆದ ನಡವಳಿಗಳ ವರದಿಯನ್ನು ಅನುಷ್ಠಾನಗೊಂಡಿರುವ ಬಗ್ಗೆ ಸಭೆಯಲ್ಲಿ ಹಾಜರಿದ್ದ ಅಧಿಕಾರಿಗಳ ಮಾಹಿತಿಯನ್ನು ಪಡೆದು, ಸಾರ್ವಜನಿಕರ ಮುಂದೆ ಮಂಡಿಸಲಾಯಿತು.

2. ಸಭೆಯಲ್ಲಿ ಸಾರ್ವಜನಿಕರು ಅಂಬೇಡ್ಕರ್‌ಗುಟ್ಟ ಪ್ರದೇಶದಲ್ಲಿ ನೀರಿನ್ನು 02 ವಾರಕ್ಕೆ ಒಮ್ಮೆ ಬಿಡಲಾಗುತ್ತಿದೆ ಎಂಬುವುದರ ಬಗ್ಗೆ ದೂರನ್ನು ತಿಳಿಸಿರುತ್ತಾರೆ. ಸದರಿ ವಿಷಯಕ್ಕೆ ಸಂಬಂಧಿಸಿದಂತೆ, ಸಭೆಯಲ್ಲಿ ಶ್ರೀ. ನವೀನ್, ಸಹಾಯಕ ಅಭಿಯಂತರರು ರವರು ಬೂಸ್ಟರ್ ಮೋಟರನ್ನು ಶ್ರೀಘ್ರದಲ್ಲಿಯೇ ಅಳವಡಿಸುವುದಾಗಿ ಹಾಗೂ ನೀರಿನ ಒಳಹರಿವನ್ನು ಹೆಚ್ಚಿಸುವುದಾಗಿ ಮತ್ತು ವಾರಕ್ಕೆ 2 ಬಾರಿ ನೀರನ್ನು ಪೂರೈಸುವುದಾಗಿ ತಿಳಿಸಿದರು.

3. ಸಭೆಯಲ್ಲಿ ಸಾರ್ವಜನಿಕರು ಕೋವಿಡ್-19ರ ಬಗ್ಗೆ ವಾರ್ಡ್‌ನಲ್ಲಿ ಹರಡುತ್ತಿರುವ ಕುರಿತಾಗಿ ಮಾಹಿತಿಯನ್ನು ಕೋರಿದರು, ಸದರಿ ವಿಷಯಕ್ಕೆ ಸಂಬಂಧಿಸಿದಂತೆ, ಡಾ||ಕಂತರಾಜು ರವರು ವಾರ್ಡ್‌ನಲ್ಲಿ ಪಾಜೀಟಿವ್ ಕೇಸ್‌ಗಳು ಹೆಚ್ಚುತ್ತಿರುವುದು ಕಂಡುಬಂದಿದ್ದು, ಹಾಗೂ ಓಮಿಕ್ರಾನ್ ಸೋಂಕಿಗೆ ಸಂಬಂಧಪಟ್ಟಂತೆ ವಾರ್ಡ್‌ನಲ್ಲಿ ಯಾವುದು ಕಂಡುಬಂದಿರುವುದಿಲ್ಲವೆಂದು ತಿಳಿಸಿದರು. ಮತ್ತು ಮುಂಜಾಗ್ರತ ಕ್ರಮವಾಗಿ ಸಾರ್ವಜನಿಕರಲ್ಲಿ ವಾಕ್ಸಿನೇಷನ್ 1 ಮತ್ತು 2ನೇ ಡೋಸ್‌ನ್ನು ತೆಗೆದುಕೊಳ್ಳಲು ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಹಮ್ಮಿಕೊಂಡಿದ್ದು, ಸಾರ್ವಜನಿಕರು ಇದನ್ನು ಸದುಪಯೋಗ ಪಡಿಸಿಕೊಳ್ಳಲು ಕೋರಿದರು.

4. ಸಭೆಯಲ್ಲಿ ಸಾರ್ವಜನಿಕರು ರವರು ಡಿ-ಸಿಲ್ವಾ ರಸ್ತೆಯಲ್ಲಿ ಬಿ.ಡಬ್ಲ್ಯೂ.ಎಸ್.ಎಸ್.ಬಿ ಇಲಾಖೆ ವತಿಯಿಂದ ರಸ್ತೆ ಆಗೆದಿರುದನ್ನು ಪೂರ್ಣನಿರ್ಮಿಸಲು ಕೋರಿದರು, ಸದರಿ ವಿಷಯಕ್ಕೆ ಶ್ರೀ. ನವೀನ್, ಸ.ಅ ಸಿಗ್ರದಲ್ಲಿ ಕಾಮಗಾರಿಯನ್ನು ಕೈಗೆತ್ತಿಕೊಳ್ಳುವುದಾಗಿ ತಿಳಿಸಿದರು.

5. ಸಭೆಯಲ್ಲಿ ಸಾರ್ವಜನಿಕರು ಎ.ಬಿ ವಾಜುಪೈಯಿ ರಸ್ತೆಯಲ್ಲಿ ಹಲವರು ತಿಂಗಳುಗಳಿಂದ ವಾಹನಗಳನ್ನು ನಿಲ್ಲಿಸಿದ್ದು, ಸದರಿ ವಾಹನಗಳನ್ನು ತೆರವುಗೊಳಿಸಲು ಕೋರಿದರು, ಸದರಿ ವಿಷಯಕ್ಕೆ ಸಂಬಂಧಿಸಿದಂತೆ, ಸಬ್ ಇನ್ಸ್‌ಪೆಕ್ಟರ್ ಟ್ರಾಫೀಕ್ ಕಾಡುಗುಡಿ ರವರು ಇದರ ಬಗ್ಗೆ ಕ್ರಮ ಕೈಗೊಳ್ಳುವುದಾಗಿ ತಿಳಿಸಿದರು.

6. ಸಭೆಯಲ್ಲಿ ಶ್ರೀ.ಪುರುಷೋತಮ್, ಪ್ರಶಾಂತ್ ಬಡಾವಣೆ ರವರು ಪ್ರಶಾಂತ್ ಬಡಾವಣೆಯಲ್ಲಿ ಬೆಸ್ಕಾಂ ವತಿಯಿಂದ ರಸ್ತೆ ಆಗೆತವನ್ನು ಮಾಡಿರುವುದರಿಂದ ಇತರಾ ಅಡ್ಡ ಪರಿಣಾಮಗಳಾದ ನೀರು ಸರಾಬರಾಜು, ಒಳಚರಂಡಿ ಪೈಪ್‌ಗಳು, ಉದ್ಭವಾಗಿದ್ದು, ಬಡಾವಣೆಯ ನಿವಾಸಿಗಳಿಗೆ ತೊಂದರೆಯಾಗಿರುವುದರ ಬಗ್ಗೆ ಮನವಿಯನ್ನು ಮಾಡಿದರು, ಸದರಿ ವಿಷಯಕ್ಕೆ ಬೆಸ್ಕಾಂ ಸಿಬ್ಬಂದಿಯವರು ಶೀಘ್ರವಾಗಿ ಮೇಲ್ಲಧಿಕಾರಿಗಳಿಗೆ ಮನವಿ ಸಲ್ಲಿಸಿ ಕ್ರಮ ಕೈಗೊಳ್ಳುವುದಾಗಿ ತಿಳಿಸಿದರು.

7. ಸಭೆಯಲ್ಲಿ ಸಾರ್ವನಿಕರು ಮುಖ್ಯರಸ್ತೆಗಳಲ್ಲಿ ಮಣ್ಣಿನ ದೂಳು ತುಂಬಿಕೊಂಡಿದ್ದು, ಇದನ್ನು ತೆರವುಗೊಳಿಸಲು ಕೋರಿದರು ಸದರಿ ವಿಷಯಕ್ಕೆ ಸಂಬಂದಿಸಿದಂತೆ ವಾರ್ಡ್ ಕಾರ್ಯದರ್ಶಿಗಳು ಕಿರಿಯ ಆರೋಗ್ಯಧಿಕಾರಿಗಳಿಗೆ ತಿಳಿಸುವುದಾಗಿ ಸಭೆಯಲ್ಲಿ ತಿಳಿಸಿದರು.

8. ಸಭೆಯಲ್ಲಿ ಸಾರ್ವಜನಿಕರು, ಎ.ಬಿ ವಾಜುಪೈಯಿ ರಸ್ತೆಯು ಸಾರ್ವಜನಿಕರ ಓಡಾಡವುದಕ್ಕೆ ಅನಾನುಕುಲವಾಗಿದ್ದು, ಕೊಡಲೇ ರಸ್ತೆಯನ್ನು ಅಭಿವೃದ್ಧಿಗೊಳಿಸಲು ಕೋರಿದರು. ಸದರಿ ವಿಷಯಕ್ಕೆ ಶ್ರೀ.ವಿ.ರವಿಚಂದ್ರ, ಎ.ಇ, ರಸ್ತೆಮೂಲಭೂತ ಸೌಕರ್ಯ ವಿಭಾಗ, ಮಹದೇವಪುರ ರವರು ಕಾಮಗಾರಿಯನ್ನು ಶೀಘ್ರದಲ್ಲಿ ಕೈಗೊಳ್ಳುವುದಾಗಿ ತಿಳಿಸಿದರು.

9. ಸಭೆಯಲ್ಲಿ ಸಾರ್ವಜನಿಕರು ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಂಡು ಶೀಘ್ರದಲ್ಲಿ ಪೂರ್ಣಗೊಳಿಸಲು ಕೋರಿದರು, ಸದರಿ ವಿಷಯಕ್ಕೆ ಸಂಬಂಧಿಸಿದಂತೆ ವಾರ್ಡ್ ಸಹಾಯಕ ಅಭಿಯಂತರರು, ಕಾಮಗಾರಿಗಳು ಟೆಂಡರ್ ಪ್ರಕ್ರೀಯೆಯು ಪೂರ್ಣಗೊಂಡ ನಂತರ ಕಾಮಗಾರುಗಳನ್ನು ಪ್ರಾರಂಭಿಸುವುದಾಗಿ ತಿಳಿಸಿದರು.

10. ಸಭೆಯಲ್ಲಿ ಸಾರ್ವಜನಿಕರು ಪ್ರತಿ ಗುರುವಾರ ಚನ್ನಸಂದ್ರ ಕಾಡುಗುಡಿಯಲ್ಲಿ ಸಂತೇ ಇರುವುದರಿಂದ ಸಾರ್ವಜನಿಕ ಒಡಾಡಟಕ್ಕೆ ತೊಂದರೆಯಾಗಿತ್ತಿರುವುದಾಗಿ ಸಭೆಯಲ್ಲಿ ತಿಳಿಸಿದರು, ಸದರಿ ವಿಷಯಕ್ಕೆ ನೋಡಲ್ ಅಧಿಕಾರಿಗಳು ವಾರ್ಡ್‌ನಲ್ಲಿ ಸ್ಥಳದ ಕೊರತೆ ಇರುವುದರಿಂದ ಹಾಗೂ ವಿಷಯವನ್ನು ವಾರ್ಡ್ ಸಹಾಯಕ ಕಂದಾಯ ಅಧಿಕಾರಿಗಳಿಗೆ ತಿಳಿಸುವುದಾಗಿ ಸೂಚಿಸಿದರು.

11. ಸಭೆಯಲ್ಲಿ ಎ.ಕೆ.ಜಿ ಕಾಲೋನಿಯ ಬಳಿ ಇರುವ ಪಾಲಿಟೇಕ್ನಿಕ್ ಕಾಲೇಜ್‌ನಲ್ಲಿ ರಾತ್ರಿಯ ಸಮಯದಲ್ಲಿ ಕೆಲವು ದ್ರುರ್ಷಕರ್ಮಿ ಅನೈತಿಕ ಚಟುವಟಿಕೆಗಳನ್ನು ನಡೆಸುತ್ತಿದ್ದು, ಇದರ ಬಗ್ಗೆ ಕ್ರಮ ಕೈಗೊಳ್ಳಲು ಕೋರಿದರು, ಸದರಿ ವಿಷಯಕ್ಕೆ ಸಹಾಯಕ ಸಬ್ ಇನ್ಸ್‌ಪೆಕ್ಟರ್, ಕಾಡುಗುಡಿ ಪೋಲೀಸ್ ಠಾಣೆ. ರವರು ರಾತ್ರಿ ಬಿಟ್‌ನ್ನು ಸ್ಥಳಕ್ಕೆ ಕಳುಹಿಸುವುದಾಗಿ ತಿಳಿಸಿದರು.

ಅಂತಿಮವಾಗಿ ನೋಡಲ್ ಅಧಿಕಾರಿಗಳು ಸಕಾಲದಲ್ಲಿ ಸಾರ್ವಜನಿಕರ ಕುಂದುಕೊರತೆಗಳನ್ನು ಆಲಿಸಿ ಸ್ಪಂದಿಸಿ ಪರಿಹರಿಸಲು ಕ್ರಮ ತೆಗೆದುಕೊಳ್ಳುವಂತೆ ಹಾಗೂ ಸಂಬಂಧಪಟ್ಟ ಎಲ್ಲಾ ಇಲಾಖೆಗಳು ಸಮನ್ವತೆಯಿಂದ ಕೆಲಸ ನಿರ್ವಹಿಸಲು ಸೂಚಿಸಿರುತ್ತಾರೆ. ನೋಡಲ್ ಅಧಿಕಾರಿ ರವರ ಸೂಚನೆಯಂತೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

7/1/2022

(ಎನ್.ವೆಂಕಟೇಶ್)
**ಸಹಾಯಕ ಅಭಿಯಂತರರು ಹಾಗೂ ವಾರ್ಡ್ ಕಮಿಟಿ ಕಾರ್ಯದರ್ಶಿ**
**ವಾರ್ಡ್ ನಂ: 83 ಕಾಡುಗುಡಿ**

**ಪ್ರತಿಯನ್ನು**

1. ಮಾನ್ಯ ಜಂಟಿ ಆಯುಕ್ತರು, ಬಿ.ಬಿ.ಎಂ.ಪಿ ಮಹದೇವಪುರ ವಲಯ,ರವರ ಮಾಹಿತಿಗಾಗಿ ಸಲ್ಲಿಸಿದೆ.
2. ಮಾನ್ಯ ಮುಖ್ಯ ಅಭಿಯಂತರರು, ಬಿ.ಬಿ.ಎಂ.ಪಿ ಮಹದೇವಪುರ ವಲಯ,ರವರ ಮಾಹಿತಿಗಾಗಿ ಸಲ್ಲಿಸಿದೆ.
3. ಕಾರ್ಯಪಾಲಕ ಅಭಿಯಂತರರು, ಬಿ.ಬಿ.ಎಂ.ಪಿ ಮಹದೇವಪುರ ವಲಯ,ರವರ ಮಾಹಿತಿಗಾಗಿ ಸಲ್ಲಿಸಿದೆ.
4. ಎಲ್ಲಾ ಸದಸ್ಯರುಗಳಿಗೆ ಮಾಹಿತಿಗಾಗಿ